**ಡಾ.ಎಸ್.ಬಿ.ಚನ್ನಗೌಡ್ರ.** ಎಂ.ಎ ಪಿಹೆಚ್.ಡಿ
ಮುಖ್ಯಸ್ಥರು ಕನ್ನಡ ವಿಭಾಗ
ಪ್ರಾಂಶುಪಾಲರು ಬಿ.ಆರ್.ತಂಬಾಕದ ಪ್ರಥಮ ದರ್ಜೆ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ
ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ ಹಿರೇಕೆರೂರು. ಜಂಗಮವಾಣಿ– ೯೪೪೮೭೮೯೩೦.

# ಸರ್ವಜ್ಞನ ಪಾಪ ಪ್ರಜ್ಞೆಯ ಪರಿಕಲ್ಪನೆ

ಒಳ್ಳೆಯ ಕರ್ಮವನ್ನು ಪುಣ್ಯವೆಂದು ಕೆಟ್ಟ ಕರ್ಮವನ್ನು ಪಾಪವೆಂದು ಕರೆಯಲಾಗುತ್ತದೆ. ಕರ್ಮ ಸಿದ್ಧಾಂತ ಹಾಗೂ ಪುನರ್ಜನ್ಮಗಳನ್ನು ಒಪ್ಪಿರುವ ಹಿಂದೂ ಧರ್ಮದ ಪ್ರಕಾರ ಎಂತಹ ಕರ್ಮವೆ ಆಗಿರಲಿ ತನಗೆ ಅನುಗುಣವಾದ ಫಲವನ್ನು ಕಾಲಕ್ರಮದಲ್ಲಿ ಕೊಟ್ಟೇ ಕೊಡುತ್ತದೆ.

ಮೃತ್ಯು ದೇವತೆಯೆತ್ತಿ । ಹೊತ್ತು ತಾನಾಡಿಸುತ ।
ತುತ್ತ ಇದ್ದಲ್ಲಿ ಒಯ್ದುಣಿಸಿ ಕಡೆಯಲ್ಲಿ ।
ಹೊತ್ತು ಚೆಲ್ಲುವಳು ಸರ್ವಜ್ಞ ।

ಮದ್ದಮೆಲ್ಲುವನು ಪ್ರ । ಬುದ್ಧನೆಂದನಬೇಡ ।
ಮದ್ದು ಸಂಕಟವ ಹೆಚ್ಚಿಸಲು ಹೆಡಕತ್ತ ।
ಗುದ್ದಿ ಕೊಳುತಿಹನು ಸರ್ವಜ್ಞ ।

'ಯಾವುದೊಂದು ಮಾನಸಿಕ ವ್ಯಥೆ–ವ್ಯಗ್ರತೆಯ ಮರೆವಿಗಾಗಿಯೋ, ಬೇಸರದ ಪರಿಹಾರಕ್ಕಾಗಿಯೊ, ಮೋಜಿಗಾಗಿಯೊ, ಸಹವಾಸದ ಸುಖಕ್ಕಾಗಿಯೊ ಸಾಮಾನ್ಯವಾಗಿ ಮನುಷ್ಯ, ಒಂದಿಲ್ಲೊಂದು ವ್ಯಸನ (ದುಶ್ಚಟ) ಕ್ಕೆ ಶರಣು ಹೋಗುತ್ತಾನೆ. ಮೊದಮೊದಲು ಆತ ಸಮಯ–ಸಂದರ್ಭದ ಒತ್ತಡಕ್ಕೊಳಗಾದಾಗ ಮಾತ್ರವೆ ಮೈಮರೆಸುವ ಮಾದಕ ಪದಾರ್ಥಗಳ ಸೇವನೆಗೆ ತೊಡಗುತ್ತಾನೆ. ಆದರೆ ಕ್ರಮೇಣ ಅದರ ಎಳೆತ–ಸೆಳೆತಕ್ಕೊಳಗಾಗಿ ಅದರ ದಾಸಾನು ದಾಸನಾಗಿ ಯಾವುದರ ಪರಿವೆ ಇಲ್ಲದೆ ವಿವೇಕಹೀನನಾಗಿ ವರ್ತಿಸುವ ಮಟ್ಟಿಗೆ ಮುಂದುವರಿಯುತ್ತಾನೆ.

ಅತಿಯಾದ ಕುಡಿತದಿಂದಾಗುವ ರೋಗಾವಸ್ಥೆಗೆ 'ಆಲ್ಕೋಹಾಲಿಸಂ' ಎನ್ನುತ್ತಾರೆ. ಮದ್ಯದಗೀಳು ಮತ್ತು ಮಾದಕ ದ್ರವ್ಯ ಸೇವನೆಯ ಚಟವು ಜಗತ್ತಿನಲ್ಲಿ ಸಾವಿರಾರು ವರ್ಷಗಳಿಂದ ಗಂಭೀರ ವರ್ತನೆಯ ಸಮಸ್ಯೆಗಳಿಗೆ ಮೂಲವಾಗಿವೆ. ಆ ವ್ಯಸನದಲ್ಲಿ ಮುಳುಗಿರುವುದು ಅನಿಷ್ಟವೆಂದು, ಅಪರಾಧವೆಂದು ಪರಿಗಣಿಸಿಲಾಗಿದೆ. ಕಾಲಕಾಲಕ್ಕೆ ಎಲ್ಲ ರಾಷ್ಟ್ರಗಳಲ್ಲಿ ಈ ದುಶ್ಚಟವನ್ನು ಹತ್ತಿಕ್ಕಲು ಕಾನೂನುಗಳನ್ನು ಮಾಡಿವೆ. ಆದರೆ ಈ ಆಲ್ಕೋಹಾಲಿಸಂ ಮತ್ತು ಮಾದಕ ದ್ರವ್ಯ ಸೇವನೆಯ ವ್ಯಸನಗಳು ಕೇವಲ ಕಾನೂನು ಮತ್ತು ಶಿಸ್ತಿನ ಸಮಸ್ಯೆಗಳು ಮಾತ್ರವಲ್ಲ. ಇತ್ತೀಚೆಗಿನ ಅಧ್ಯಯನಗಳು ಬೇರೆಯಲ್ಲದಕ್ಕಿಂತ ಈ ದುಶ್ಚಟಗಳು ಹೆಚ್ಚು ಮಾನಸಿಕ, ಮನೋವೈದ್ಯಕೀಯ ಮತ್ತು ಸಾಮಾಜಿಕ ಸಮಸ್ಯೆಗಳಾಗಿವೆ. ಈ ಚಟಗಳು ವ್ಯಕ್ತಿಯನ್ನು ಮತ್ತು ಸಮಾಜವನ್ನು ಭಾವನಾತ್ಮಕವಾಗಿ ಮತ್ತು ಆರ್ಥಿಕವಾಗಿ ನಾಶಪಡಿಸುತ್ತಿವೆ.

ಆಲ್ಕೋಹಾಲಿಸಂ ಇದು ಸಾಮಾನ್ಯವಾಗಿ ಅತಿಯಾದ ಕುಡಿತ, ಮದ್ಯಸಾರದ ಮೇಲೆ ಅಥವಾ ಶರಾಬಿನ ಮೇಲೆ ಅತಿಯಾದ ಅವಲಂಬನೆಗೆ ಅನ್ವಯಿಸುತ್ತದೆ. ಜನರು ಹಲವಾರು ಕಾರಣಗಳಿಗಾಗಿ ಮತ್ತು ಹಲವಾರು ಬಗೆಗಳಲ್ಲಿ, ಸನ್ನಿವೇಶಗಳಲ್ಲಿ ಹಲವು ಶೈಲಿಯಲ್ಲಿ ಕುಡಿಯುತ್ತಾರೆ. ಅವರನ್ನು ಆಲ್ಕೋಹಾಲಿಕ್ಸ ಎಂದು ಕರೆಯುವಂತಿಲ್ಲ. 'ದಿ ವರ್ಲ್ಡ್ ಹೆಲ್ತ್ ಆರ್ಗನೈಜೇಶನ್' (WHO) ಆಲ್ಕೋಹಾಲಿಸಂ ಕುರಿತು ಹೀಗೆ ಅರ್ಥ ವಿವರಣೆ ನೀಡಿದೆ. 'ಅತಿಯಾದ ಕುಡಿತ ಅವನ ಆಲ್ಕೋಹಾಲ್ ಮೇಲೆ ಅವಲಂಬನೆ ಎಷ್ಟಾಗಿದೆ ಎಂದರೆ ಅವನು ಗಮನಾರ್ಹವಾಗಿ ಮಾನಸಿಕ ಅಸ್ಥಿರತೆಯನ್ನು ಪ್ರಕಟಪಡಿಸುತ್ತಾನೆ. ಅಥವಾ ಅವನ ಮಾನಸಿಕ ಮತ್ತು ದೈಹಿಕ ಸ್ವಾಸ್ಥ್ಯವು ಹದಗೆಟ್ಟಿರುತ್ತದೆ. ಅವನು ಸಾಮಾಜಿಕ

ವ್ಯಕ್ತಿಗಳೊಂದಿಗೆ ಅವನ ಹೆಂಡತಿ ಮಕ್ಕಳೊಂದಿಗಿನ ಸಂಬಂಧಗಳೂ ಹದಗೆಟ್ಟಿರುತ್ತವೆ. ಮತ್ತು ಅವನ ಆರ್ಥಿಕ ಪರಿಸ್ಥಿತಿಯು, ಸಾಮಾಜಿಕ ಸಂಬಂಧಗಳು ಹಾಳಾಗಿರುತ್ತವೆ. ಅಂತಹ ಬೆಳವಣಿಗೆಯ ಪೂರ್ವಚಿಹ್ನೆಯನ್ನು ಪ್ರಾರಂಭದಲ್ಲಿಯೆ ತೋರಿಸುತ್ತಾನೆ. ಆಲ್ಕೋಹಾಲಿಸಂ ಮಾನವನ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಕೆಲಸಗಳಲ್ಲಿ ಗಂಭೀರ ತೊಂದರೆಗಳನ್ನು ಉಂಟು ಮಾಡುತ್ತದೆ.' ಆಡು ಮುಟ್ಟದ ಸೊಪ್ಪಿಲ್ಲ, ಸರ್ವಜ್ಞ ಹೇಳದ ವಿಷಯವಿಲ್ಲ. ಎಂಬ ಮಾತಿನಂತೆ ಸಮಾಜದಲ್ಲಿ ಕಂಡು ಬರುವ ಪ್ರತಿಯೊಂದನ್ನು ಭೂತ, ವರ್ತಮಾನ, ಭವಿಷ್ಯತ್ ಕಾಲಕ್ಕನುಗುಣವಾಗಿ ವಾಸ್ತವಿಕವಾಗಿ ಚಿತ್ರಿಸಿದ್ದಾರೆ.

ಸುರೆಯ ಸೇವಿಸುವವನ । ಸುರಿಗೆಯನು ಪಿಡಿದವನ ।
ದೊರೆಯೊಲುಮೆಗಾಗಿ ಹೆಣಗುವನ ಕಾಯವದು ।
ಸೊರಗಿ ಸಾಯುವದು ! ಸರ್ವಜ್ಞ।

ಸುರೆಯ ಸೇವಿಸುವಂಗೆ । ಸಿರಿಗರವು ಪಿಡಿದಂಗೆ ।
ದೊರೆಯಲ್ಲಿ ತೇಜ ಪಡೆದಂಗೆ ಶಿರವಿಹುದು ।
ಸ್ಥಿರವಲ್ಲ ನೋಡ ಸರ್ವಜ್ಞ।

ಸುರೆ ಎಂದರೆ ಮದ್ಯ. ಮದ್ಯವನ್ನು ಕುಡಿಯುವವನು, ಖಡ್ಗವನು ಹಿಡಿದವನು, ರಾಜನ ಪ್ರೀತಿಗಾಗಿ ಪ್ರಯತ್ನಿಸುವವನು ಇವರನ್ನು ಕಾಯುವುದೆಂದರೆ ಸೊರಗಿ ಸಾಯುವುದೆ ಆಗಿರುವುದು. ಇಂಥವವನ್ನು ಕಾಯುವುದು ನಾವು ಮಾಡುವ ಕಾರ್ಯ ಸಾಧನೆಗಿಂತ ಕಷ್ಟಕರವಾದ ಕೆಲಸವಾಗಿದೆ. ಯಾವುದಾದರೂ ಕಾರ್ಯಸಾಧನೆ ಮಾಡಬೇಕೆಂದರೆ ಅದಕ್ಕೆ ತಾಳ್ಮೆ, ಶ್ರಮ ಹಾಗೂ ಅತಿಯಾದ ಸಮಯ ಬೇಕಾಗುವುದು. ಈ ಕಾರ್ಯಸಾಧನೆಗಿಂತಲೂ ಕಷ್ಟಕರವಾದ ಕೆಲಸ ಇವರನ್ನು ಕಾಯುವುದು. ಸರ್ವಜ್ಞನ ದೃಷ್ಟಿಯಲ್ಲಿ ಮಾನವನ ಜೀವಿತಾವಧಿಯಲ್ಲಿಯೂ ಇಂತಹ ಕೆಲಸಗಳನ್ನು ಮಾಡುವವರನ್ನು ಕಾಯಬೇಕಾಗುತ್ತದೆ. ಇಲ್ಲಿ ಒಬ್ಬ ವ್ಯಕ್ತಿಯ ತಾಳ್ಮೆ, ಶ್ರಮ, ಶಕ್ತಿ ಎಲ್ಲವೂ ವ್ಯಯವಾಗಿ ಹೋಗುತ್ತದೆ. ಆದ್ದರಿಂದ ಇದು ಸಮಾಜಕ್ಕೆ ಕಂಟಕಪ್ರಾಯವೆಂದಿದ್ದಾನೆ.

ಮದ್ಯಪಾನವನ್ನು ಸೇವಿಸುವವನು, ಹಣದ ಹುಚ್ಚು ಹಿಡಿದವನು, ರಾಜನ ಗೌರವ ಪಡೆದವನು ಇಂಥವರ ತಲೆಯು ಸ್ಥಿರವಾದ ರೀತಿಯಲ್ಲಿರುವುದಿಲ್ಲ. ಪರಿಜ್ಞಾನವಿಲ್ಲದೆ ಆಲೋಚನಾ ಮಗ್ನತೆಯನ್ನು ಕಳೆದುಕೊಂಡಿರುತ್ತಾರೆ. ಗರ ಹಿಡಿದವರ ಎಬ್ಬಿಸಬಹುದು, ಸಿರಿಗರ ಹಿಡಿದವರ ಎಬ್ಬಿಸಲಾಗದು ಎಂಬ ಬಸವಣ್ಣನವರ ವಚನದಲ್ಲಿ ಕಾಣುವಂತೆ ಸಂಪತ್ತಿನ ಮದವಿರುವ ವ್ಯಕ್ತಿಗಳು ಸಮಾಜಕ್ಕೆ ಗೌರವ ಕೊಡುವುದಿಲ್ಲ. ಅವರು ಸಮಾಜಕ್ಕಿಂತ ನಾವೆ ದೊಡ್ಡವರು ಎಂದುಕೊಂಡಿರುತ್ತಾರೆ. ಅದೇ ರೀತಿ ಕುಡಿದ ಮತ್ತಿನಲ್ಲಿರುವ ವ್ಯಕ್ತಿಯಾಗಲಿ ರಾಜನಿಂದ ಮನ್ನಣೆ ಪಡೆದ ವ್ಯಕ್ತಿಯಾಗಲಿ ಇವರು ಸಮಾಜವನ್ನು ಕೀಳಾಗಿ ಕಂಡುಕೊಂಡಿರುತ್ತಾರೆ. ವ್ಯಕ್ತಿಗಿಂತ ಸಮಾಜ ದೊಡ್ಡದು, ಸಮಾಜಕ್ಕಿಂತ ರಾಷ್ಟ್ರ ದೊಡ್ಡದು ಎಂಬ ಪರಿಕಲ್ಪನೆಯನ್ನು ಮರೆತು ವರ್ತಿಸುತ್ತಿರುತ್ತಾರೆ. ಇಂಥವರಿಂದ ಸುಂದರ ಸಮಾಜದ ಕನಸನ್ನು ಕಾಣಲಾದೀತೆ? ಎಂಬುದೇ ಸರ್ವಜ್ಞನ ಪ್ರಶ್ನೆಯಾಗಿದೆ.

ಸುರೆಯ ಹಿರಿದುಂಡವಗೆ । ಉರಿಯ ಮೇಲ್ದುಡುಕುವಗೆ ।
ಹರಿಯುವ ಹಾವು, ಪರನಾರಿ ಪಿಡಿದಂಗೆ ।
ಮರಣದ ನೆರಳು ಸರ್ವಜ್ಞ।

ಸಿಂದಿಯನು ಸೇವಿಪನು । ಹಂದಿಯಂತಿರುತಿಹನು ।
ಹಂದಿಯೊಂದೆಡೆಗೆ ಉಪಕಾರಿ ಕುಡಿಕನು ।
ಹಂದಿಗೂ ಕಷ್ಟ ಸರ್ವಜ್ಞ।

ಸರ್ವಜ್ಞನ ದೃಷ್ಟಿಯಲ್ಲಿ ಈ ಮದ್ಯಪಾನ ವ್ಯಸನಿಗಳು ಸಮಾಜಕ್ಕೆ ಕಂಟಕಪ್ರಾಯ ಎಂಬುದನ್ನು ಈ ಹಿಂದೆಯೆ ನೋಡಿದ್ದೇವೆ. ಇವರು ಸಮಾಜಕ್ಕಷ್ಟೆ ಕಂಟಕವಾಗಿರುವುದಿಲ್ಲ ತಮ್ಮ ಭವಿಷ್ಯದ ಬಗ್ಗೆ ಇವರಿಗೆ ಯಾವ ಚಿಂತೆಯೂ ಇರುವುದಿಲ್ಲ. ತಾನು ತನ್ನ ಕುಟುಂಬ ಎಂಬುದನ್ನು ಮರೆತು ವರ್ತಿಸುತ್ತಾರೆ. ಈ ಮದ್ಯಪಾನ ವ್ಯಸನಿಗಳೊಂದಿಗೆ ಇನ್ನೂ ಹಲವು ತರಹದ ವ್ಯಸನಿಗಳು ಈತನೊಂದಿಗೆ ಸೇರಿಕೊಂಡಿರುತ್ತಾರೆಂಬುದನ್ನು ಸರ್ವಜ್ಞ ತಿಳಿಸುತ್ತಾನೆ. ಅವರು ಯಾರೆಂದರೆ ಮದಿರೆಯನು ಕುಡಿಯುವವನು, ಬೆಂಕಿಯ ಮೇಲೆ ನಡೆಯುವವನು, ಹರಿವ ಹಾವನ್ನು ಹಿಡಿಯುವವನು, ಪರನಾರಿಯನ್ನು ಬಯಸುವವನು, ಮರಣವಿದೆ ಎಂದು ಗೊತ್ತಿದ್ದರು ಸಹ ಅದರ ಗೆಳೆತನ ಬಯಸುತ್ತಾರೆ. ಇವರಿಗೆ ಮರಣದ ಮಹಾ ಬಾಗಿಲು ಸದಾ ತೆರೆದಿರುತ್ತದೆ. ಹಾಗಿದ್ದೂ ಇಂತಹ ವ್ಯಸನಗಳಿಂದ ದೂರವಾಗಲು ಬಯಸುವುದಿಲ್ಲ. ತಮ್ಮ ಅವನತಿಯನ್ನು ತಾವೆ ಆಹ್ವಾನಿಸಿಕೊಳ್ಳುತ್ತಾರೆ ಇಂತಹವರಿಗೆ ಬುದ್ಧಿ ಹೇಳಲಾದೀತೆ?

ಹಂದಿಯ ಹಗಲಿರುಳು ವಾಸವು ಚರಂಡಿಯೆ ಆಗಿರುತ್ತದೆ. ಹಂದಿಯು ಇತರ ಪ್ರಾಣಿಗಳಂತೆ ಪರಿಸರಕ್ಕೆ ಒಳ್ಳೆಯ ವಾತಾವರಣವನ್ನು ಉಂಟುಮಾಡುವಂತಹ ಶಕ್ತಿ ಅದಕ್ಕಿರುವುದಿಲ್ಲ. ಅದರದೇನಿದ್ದರೂ ಚರಂಡಿಯಲ್ಲಿಯೇ ತನ್ನ ದಿನ ನಿತ್ಯದ ಬದುಕನ್ನು ಕಳೆಯುತ್ತದೆ. ತನ್ನ ಮೂತಿಯನ್ನು ಅದರಲ್ಲಿಟ್ಟು ಪರಿಸರವನ್ನು ಹೊಲಸು ಮಾಡುವುದೆ ಅದರ ಕಾಯಕವಾಗಿರುತ್ತದೆ. ಹಂದಿಯಾದರು ಒಂದು ಸಾರಿ ಉಪಯೋಗಕ್ಕೆ ಬರಬಹುದು ಆದರೆ ಈ ಸೆಂದಿ ಕುಡಿಯುವವನು ಕೊನೆಗೊಂದು ದಿನ ಹಂದಿವಾಸಕ್ಕೆ ಸೇರಿ ಬಿಡುತ್ತಾನೆ. ಸಮಾಜದ ಕಣ್ಣಿಗೆ ಹೀನಾಯ ವ್ಯವಸ್ಥೆಯಲ್ಲಿ ಗೋಚರಿಸುತ್ತಾನೆ. ಊರಿಗೆ ಉಪಕಾರಿಯಾಗದೆ, ಮನೆಗೊಬ್ಬ ಒಳ್ಳೆಯ ಮನುಷ್ಯನಾಗದೆ, ಸಮಾಜ ಕಂಟಕನಾಗುತ್ತಾನೆ. ಪವಿತ್ರವಾದ ಮಾನವ ಜೀವನದ ಅರ್ಥವನ್ನು ತಿಳಿದುಕೊಳ್ಳದ ಮೂಢನಾಗಿ ತುಚ್ಚ ಪ್ರಾಣಿಗಳಿಗಿಂತಲೂ ಕಡೆಯಾಗಿ ಕೊನೆಗೊಂದು ದಿನ ಅಂತ್ಯವಾಗುತ್ತಾನೆ. ಇಂಥವರಿಂದ ಸಮಾಜದ ಒಳಿತು ಹೋಗಲಿ, ತಮ್ಮ ಒಳಿತನ್ನು ಬಯಸದ ಇವರು ಸಮಾಜಕ್ಕೇನು ಕೋಟ್ಟಾರು ಎಂಬುದೆ ಸರ್ವಜ್ಞನ ಅಭಿಮತವಾಗಿದೆ. ದುಶ್ಚಟವೆಂಬುದು ಮಾನವನನ್ನು ಎಂಥ ಅಧೋಗತಿಗೆ ಕರೆದೊಯ್ಯುತ್ತದೆ ಎಂಬ ಮಾನವೀಯ ಅನುಕಂಪ ವ್ಯಕ್ತವಾಗಿರುವುದನ್ನು ಕಾಣಬಹುದು.

ಹೆಂಡವನು ಕುಡಿಕುಡಿದು । ಕಂಡವರ ತಾ ಜರಿದು ।
ಬಂಡುನುಡಿಗಳಿಗೆ ನಾಚದ ನೀಚನ ।
ಕಂಡಿಹರೆ ತೊಲಗು ಸರ್ವಜ್ಞ ।

ನೀಚಜನ ನೆರೆಯಿಂದ । ಈಚಲದ ಮರ ಲೇಸು ।
ಈಚಲೊಂದೆಡೆಗೆ ಉಪಕಾರಿ ನೀಚ ತಾ ।
ಈಚಲಿಂ ಕಷ್ಟ ಸರ್ವಜ್ಞ ।

ಮದ್ಯಪಾನವ ಮಾಡಿ । ಇದ್ದುದೆಲ್ಲವ ನೀಗಿ ।
ಬಿದ್ದು ಬರುವವನ ಸದ್ದಡಗಿ ಸಂತಾನ ।
ವೆದ್ದು ಹೋಗುವದು ! ಸರ್ವಜ್ಞ ।

ಮಾನವನ ಶಾರೀರಿಕ ಕ್ಷೇಮವನ್ನು ಕಾಪಾಡಿಕೊಳ್ಳುವಲ್ಲಿ ವಹಿಸಬೇಕಾದ ಎಚ್ಚರಿಕೆಗಳನ್ನು ವಹಿಸದೆ ಇದ್ದಲ್ಲಿ ಎಂತಹ ಭಯಾನಕ ದುರವಸ್ಥೆಗೆ ಈಡಾಗುತ್ತಾನೆಂಬುದನ್ನು ಮೇಲೆ ನೋಡಿದ್ದೇವೆ. ಆ ನಿಟ್ಟಿನಲ್ಲಿ ಸರ್ವಜ್ಞನ ವಚನಗಳಲ್ಲಿ ಈ ಲೋಕದ ಡೊಂಕುಗಳನ್ನು ತಿದ್ದುವುದರ ಜೊತೆಗೆ ಮನುಷ್ಯನ ಆರೋಗ್ಯವನ್ನು ಕಾಪಾಡಿಕೊಳ್ಳಲು ಪಾಲಿಸಬೇಕಾದ ಆಚರಣೆಗಳನ್ನು ಸರ್ವಜ್ಞ ಹೇಳುತ್ತಾನೆ. ಅಸಾಧಾರಣ ವೈದ್ಯಕೀಯ ಪಾಂಡಿತ್ಯವನ್ನು ಹೊಂದಿರುವ ಸರ್ವಜ್ಞ ಕಂಡ ಮತ್ತು ಕಂಡರಿಯದ ಸರ್ವ ವಿಷಯಗಳನ್ನು ತನ್ನ ವಚನಗಳ ಮುಖಾಂತರ ಚಿತ್ರಿಸಿದ್ದಾನೆ. ಅವನಿಂದ ರಚಿತವಾದ ತ್ರಿಪದಿಗಳಲ್ಲಿ ಆಯುರ್ವೇದ, ಆಹಾರಶಾಸ್ತ್ರ, ಕಾಮಶಾಸ್ತ್ರ, ಯೋಗಶಾಸ್ತ್ರ, ಜೀವಶಾಸ್ತ್ರ, ಲೈಂಗಿಕಶಾಸ್ತ್ರ ಹೀಗೆ ಎಲ್ಲ ವಿಧವಾದ ವೈದ್ಯಕೀಯ ಹಾಗೂ ಪರಿಸರಕ್ಕೆ

ಸಂಬಂಧ ಪಟ್ಟ ಎಲ್ಲ ವಿಚಾರಗಳನ್ನು ಸಮರ್ಥವಾಗಿ, ಅರ್ಥಗರ್ಭಿತವಾಗಿ ತಿಳಿಸಿರುತ್ತಾನೆ. ಈ ನೆಲೆಯಲ್ಲಿ ಸಮಾಜದಲ್ಲಿರುವ ಕುಡುಕರಿಗೆ ಒಳ್ಳೆಯ ಸ್ಥಾನ ಮಾನಗಳಿರುವುದಿಲ್ಲವೆಂದು ಅಂಥವರ ಸಹವಾಸ ಮಾಡಬಾರದೆಂದು ಎಚ್ಚರಿಕೆಯನ್ನು ನೀಡುತ್ತಾನೆ. ಹಾಗೂ ಅಂತಹ ವ್ಯಕ್ತಿಗಳನ್ನು ಕಂಡು ಕಠೋರ ಶಬ್ದಗಳಲ್ಲಿ ತಿದ್ದಲು ಪ್ರಯತ್ನಿಸುತ್ತಾನೆ. ಹೆಂಡವನ್ನು ಕುಡಿಕುಡಿದು, ಕಂಡವರಿಗೆ ಕೈಚಾಚಿ, ಕಂಡಕಂಡಡೆ ತಿರುಗಿ ಬೀಳುವ, ಸಮಾಜಕ್ಕೆ ಹಾನಿಯುಂಟುಮಾಡುವ ಭಂಡ ನುಡಿಗಳನ್ನಾಡಲು ನಾಚದ ನೀಚನ ಕಂಡರೆ ತೊಲಗು ಎಂದು ಹೇಳುತ್ತಾನೆ. 'ಕೆಟ್ಟವರ ಗೆಳೆತನ ಮಾಡಬಾರದು' ಎಂಬ ಸಂದೇಶವನ್ನು ಸಮಾಜಕ್ಕೆ ಕೊಡುತ್ತಾನೆ.

ಈಚಲ ಮರದಲ್ಲಿ ಜೀವ ಮಾರಕ ಸೆಂದಿ ಉತ್ಪತ್ತಿಯಾಗುತ್ತದೆ. ಆ ಮರದಿಂದ ಮಾನವನ ಜೀವನದ ಮೇಲೆ ಅತಿಕೆಟ್ಟ ಪರಿಣಾಮ ಬೀಳುತ್ತದೆ. ಅದು ಪ್ರಕೃತಿಯ ನಿಯಮ. ಅದೇ ಮರದಲ್ಲಿ ಈಚಲದ ಕೊಬ್ಬರಿಯೂ ಸಿಗುತ್ತದೆ, ಆ ಕೊಬ್ಬರಿಯಿಂದ ಆರೋಗ್ಯಕ್ಕೆ ಒಳಿತಾಗಬಹುದು. ಆದರೆ ನೀಚ ಜನರ (ನೆರೆ) ಸಹವಾಸದಿಂದ ಇಡೀ ಸಮಾಜದ ಸ್ವಾಸ್ಥ್ಯವೇ ಕೆಟ್ಟು ಹೋಗುತ್ತದೆ. ಇವರಿಗಿಂತ ಈಚಲಮರವೇ ಶ್ರೇಷ್ಠ. ಇಲ್ಲಿ ಕವಿಯ ದೂರದೃಷ್ಟಿಯನ್ನು ಅವಲೋಕಿಸಬೇಕಾಗುತ್ತದೆ. ಪ್ರಕೃತಿಯಲ್ಲಿ ಹುಟ್ಟಿದ ಯಾವುದೆ ಪ್ರಾಣಿ, ಪಕ್ಷಿ, ಸಸ್ಯ ಸಂಕುಲಗಳಿಂದ ನಮಗೆ ಕೆಡುಕಾದರೂ ಅದಕ್ಕಿಂತ ಹೆಚ್ಚಾಗಿ ಒಳಿತನ್ನು ಅವುಗಳಿಂದ ಪಡೆದುಕೊಳ್ಳುತ್ತೇವೆ. ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಾವು ಅವುಗಳ ಉಪಯೋಗವನ್ನು ಪಡೆದುಕೊಳ್ಳುತ್ತೇವೆ. ಅಂಥವುಗಳಿಂದ ಉತ್ಪಾದನೆಯಾಗುವ ವಸ್ತುಗಳು ನಮ್ಮ ಪ್ರತಿನಿತ್ಯ ಜೀವನದ ಬದುಕಿನಲ್ಲಿ ಒಂದಲ್ಲಾ ಒಂದು ಉಪಯೋಗಕ್ಕೆ ಬಳಕೆ ಮಾಡಿಕೊಳ್ಳುತ್ತೇವೆ.

ಆದರೆ ನೀಚ ಜನರಿಂದ ಯಾವ ಉಪಯೋಗವು ಆಗುವುದಿಲ್ಲ. ಉಪಯೋಗ ಆಗದಿರಲಿ ಆದರೆ ಕೆಡುಕನ್ನು ತಂದೊಡ್ಡುತ್ತಾರೆ. ಅಂಥವರ ಸಹವಾಸ ಬೇಡವೇ ಬೇಡವೆಂದು ಸರ್ವಜ್ಞ ಸೂಚಿಸುತ್ತಾನೆ. ಸರ್ವಜ್ಞ ಮದ್ಯಪಾನ ಮಾಡುವವರ ಕುರಿತು ಇನ್ನೊಂದು ಭಯಾನಕ ಎಚ್ಚರಿಕೆ ನೀಡುತ್ತಾನೆ. ಮದ್ಯಪಾನ ಮಾಡುವವರು ತನ್ನ ಸಂಸಾರದಲ್ಲಿ ಇದ್ದುದೆಲ್ಲವನ್ನು ಕಳೆದು ಸರ್ವನಾಶಗೊಳಿಸಿ ಕಂಡಕಂಡಲ್ಲಿ ಚಂಡಡಿಯಾಗಿ ಬಿದ್ದು ಮನೆಗೆ ಬರುವವನ ಸಂತಾನ ಸದ್ದಡಗಿ ಹೋಗುವುದರಲ್ಲಿ ಸಂಶಯವಿಲ್ಲ ಎಂಬ ಮಾನವೀಯ ಸಂದೇಶವನ್ನು ಸಾರುವುದರೊಂದಿಗೆ ಸಮಾಜ ಪರಿವರ್ತನೆ ಮಾಡಲು ಸರ್ವಜ್ಞನ ಕಠಿಣವಾದ ನುಡಿಗಳಿಂದ ಸರಿದಾರಿಗೆ ತರಲು ಪ್ರಯತ್ನಿಸಿದಂತಿದೆ.

**ಭಂಗಿ :** ದುಶ್ಚಟಗಳ ಕುರಿತು ಸರ್ವಜ್ಞ ಪರಿಪೂರ್ಣ ಜ್ಞಾನಿಯಂತೆ ಸನ್ಮಾರ್ಗ ದರ್ಶನ ನಿಡಿರುತ್ತಾನೆ. ದುಶ್ಚಟಗಳಿಂದ ವ್ಯಕ್ತಿಗೆ, ಸಮಾಜಕ್ಕೆ ಆಗುವ ಹಾನಿಯನ್ನು ತಡೆಯಲು ತನ್ನ ವಚನಗಳ ಮುಖಾಂತರ ಪ್ರಯತ್ನಿಸಿದ್ದುಂಟು. 'ಚರಸ್' ಅನ್ನುವ ಮಾದಕ ವಸ್ತುವನ್ನು ಈ ಮೂಲಿಕೆಯ ಪತ್ರೆಗಳಿಂದ ಮಾಡುತ್ತಾರೆ. ಹೆಚ್ಚಿನ ಪ್ರಮಾಣದಲ್ಲಿ ಸೇವಿಸಿದರೆ ತಲೆತಿರುಗಿ ಜ್ಞಾನತಪ್ಪಬಹುದು ಮತ್ತು ಮುಂದೆ ಗಾಢ ನಿದ್ರೆ ಉಂಟಾಗಿ ಉಸಿರು ಕಟ್ಟಿ ಸಾಯಲೂಬಹುದು. 'ಭಂಗಿ' ಎಂಬ ಈ ಬಗೆಯ ಗಿಡ ಸಾಮಾನ್ಯವಾಗಿ ನಾಲ್ಕಾರು ಅಡಿ ಎತ್ತರದ ಪೊದೆಯಾಗಿ ಬೆಳೆಯುತ್ತದೆ. ಕಾಂಡದ ತುದಿಯಲ್ಲಿ ಗೊಂಚಲಾಕಾರವಾಗಿ ಹೂಗಳನ್ನು ಬಿಡುವುದು. ಈ ಸೊಪ್ಪನ್ನು ಬೆಳೆಯುವುದನ್ನು ಸರಕಾರ ನಿಷೇಧಿಸಿದೆ. ಏಕೆಂದರೆ ಇದರ ಹೆಚ್ಚಿನ ಉಪಯೋಗದಿಂದ ಹೃದಯ, ಮನಸ್ಸು ಮತ್ತು ನರಮಂಡಲದ ಮೇಲೆ ತೀವ್ರ ಪರಿಣಾಮವನ್ನುಂಟು ಮಾಡುವುದು. ಅದರ ಜೊತೆಗೆ ಮನಕ್ಷೋಭೆ ಉಂಟಾಗುವುದು. ಒಮ್ಮೊಮ್ಮೆ ಸಮ್ಮೋಹನಾ ರಚಿಸಿ ಬಹಳ ಹೊತ್ತು ಭಯಗ್ರಸ್ತನಂತೆ ಮಾಡುವುದು. ಭಂಗಿ ಚಟವುಳ್ಳವರು ಇದನ್ನು 'ಮಣ್ಣಿನ ಚಿಲುಮೆ'ಯ ಕೊಳವೆಯಾಕಾರದ ತುದಿ ಕಿರಿದಾದ ಮತ್ತೊಂದು ತುದಿ ಅಗಲವಾದ ಕೊಳವೆಯಲ್ಲಿ ಹಾಕಿ ಬೆಂಕಿ ಹಚ್ಚಿಕೊಂಡು ಸೇದುತ್ತಾರೆ. ಇದೊಂದು ಕೆಟ್ಟ ಚಟ. ಈ ಚಟದಿಂದ ಮನುಷ್ಯ ಕೆಲವೆ ನಿಮಿಷಗಳಲ್ಲಿ ಮೌನವಾಗಿಬಿಡುತ್ತಾನೆ. ಕಾರಣ ಇಷ್ಟೆ ನರಮಂಡಲದ ಮೇಲೆ ಮತ್ತಿನ ಪರಿಣಾಮ ಉಂಟಾಗಿ ಅಮಲೇರಿ ಕರ್ತವ್ಯವನ್ನು ಮರೆತು ಅಹಿತಕರ ಪರಿಣಾಮ ಉಂಟಾಗಿ ಮನುಷ್ಯನ ದೇಹದ ರಚನೆಯ ಕರ್ತವ್ಯದ ಮೇಲೆ ಸಾಕಷ್ಟು ನಷ್ಟ ಉಂಟಾಗುತ್ತದೆ.'

ಅಂಗಿ ಅರಿವೆಯ ಮಾರಿ । ಭಂಗಿಯನು ತಾ ಸೇದಿ ।
ಮಂಗನಂದದಿ ಕುಣಿವಾತ ಭವ ಭವದಿ ।
ಭಮಗಗೊಳುತಿಹನು ಸರ್ವಜ್ಞ ।

ಭಂಗಿಯನು ಸೇದುವವನ । ಭಂಗವನು ಏನೆಂಬೆ ।
ಭಂಗಿಯ ಗುಂಗು ತಲೆಗೇರಲಾಡುತಿಹ ।
ಮಂಗನಂತಿಹನು ಸರ್ವಜ್ಞ।

ಭಂಗಿಯ ವ್ಯಸನವನ್ನು ಹಾಗೂ ಅದರ ತೀವ್ರ ಪರಿಣಾಮವನ್ನು ಮೇಲೆ ಕಾಣಿಸಿರುತ್ತೇವೆ. ಮಂಗನ ಕುಣಿತ, ತಾಳವಿಲ್ಲದೆ ಮೇಳವಿಲ್ಲದೆ, ಕೊಂಬೆಯಿಂದ ಕೊಂಬೆಗೆ, ಮರದಿಂದ ಮರಕ್ಕೆ ಹಾರುವ ಮರ್ಕಟನನಂತೆ ವರ್ತಿಸುತ್ತಾನೆ ಭಂಗಿಯನ್ನು ಸೇದಿದಾತ. 'ಭಂಗಿ ಸೇದಿದಾತನಿಗೆ ಕಾಗೆ ಕೂಗು ಕರ್ಣ ಮಧುರ, ಅಪ್ಪ ಅಮ್ಮನ ಕೂಗು ರಣ ಕರ್ಕಶ' ಇಟ್ಟ ಹೆಜ್ಜೆ ಭಾರವೆನಿಸಿ ಸುಸ್ತಾಗಿ ಸರಿದಾರಿ ತಿಳಿಯದೆ ಸುಡುಗಾಡತ್ತ ಮುಖಮಾಡಿದ್ದೇನೆ. ಸ್ವರ್ಗ–ಸುಖ ಲೆಕ್ಕವಿಲ್ಲದಷ್ಟು ಒಂದೋ, ಎರಡೋ ಹೆಜ್ಜೆ ಇಟ್ಟಿದ್ದೇನೆ ನನ್ನನ್ಯಾರಾದರು ನಡೆದಾಡುವ ದೇವರು ಎಂದು ಬಿಟ್ಟರೆ ಎಂಬ ಹಳೆ ಆಸೆ, ಹೆಜ್ಜೆಗಳಲ್ಲುಂಟು ಇದರ ಪರಿವೆ ನೊಂದಿದ್ದೇನೆ.'

ಜನ್ಮ ಜನ್ಮಾಂತರಗಳಲ್ಲಿ ಸೋಲು ಅನುಭವಿಸಿ ವಿನಾಶದಂಚಿಗೆ ಹೋಗುತ್ತಾನೆ. ತನ್ನ ಮೈಮೇಲಿನ ಜ್ಞಾನ ಪರಿಜ್ಞಾನ ಅವುಗಳ ಜೊತೆಗೆ ಉಟ್ಟ ಅರಿವೆಯನು ಮಾರಿ ಮಂಗನಂತೆ ವರ್ತಿಸುತ್ತಾನೆ. ಸರ್ವಜ್ಞ ಭಂಗಿ ಸೇದುವವನ ಈ ವಿಕೃತ ಜೀವನಾವಸ್ಥೆಯನ್ನು ಬಹಳಷ್ಟು ಕಠೋರವಾಗಿ ಚಿತ್ರಿಸಿದ್ದಾನೆ. ಓಣಿಯಲ್ಲಿ ಕಾಣಬರುವ ಉಪದ್ರವಿಗಳಾದಂತವರು ಇಲ್ಲಿ ಮಂಗನ ಪ್ರತಿಮೆ, ಭಂಗಿ ಸೇದುವವನ ಬೇಜವಾಬ್ದಾರಿತನ, ಬಡಬಡಿಕೆ, ಹಂದಿಯ ಪ್ರತಿಮೆ, ಸೆಂದಿ ಕುಡಿಯುವವನ ಹೊಲಸುತನ, ತನ್ನತನದ ಕ್ಷುದ್ರತೆಯನ್ನು ಮನಸ್ಸಿಗೆ ತಟ್ಟಿಸುತ್ತದೆ.

**ತಂಬಾಕು:** ಸಿಗರೇಟು ಸೇದುವುದು, ತಂಬಾಕು ತಿನ್ನುವುದು ಆರೋಗ್ಯದ ದೃಷ್ಟಿಯಿಂದ ಬಹು ಅಪಾಯವೆಂದು ಹೇಳುವಲ್ಲಿ, ಇಂಥವರ ಬಾಯಿ ನೋಡಲು ಅಸಹ್ಯಕರವಾಗಿ ಕಾಣುವುದು. ಅಷ್ಟೇ ಅಲ್ಲದೆ ದುರ್ನಾತದ ನೆಲೆವೀಡಾಗಿರುವುದು, ಇಂತಹ ಸಾಮಿಪ್ಯ ಅದೆಂತಹ ಅಸಹ್ಯಕಾರಿ ಎಂಬ ಅಂಶವನ್ನು ಸೊಗಸಾಗಿ ಬಿಂಬಿಸುತ್ತಾನೆ. ಆತ ಬಳಕೆ ಮಾಡಿದ ಪ್ರತಿಮೆ 'ಸಿಂದಿಯ ಲಗಳಿ' ಬಾಯಿ ಎಂಬುದನ್ನ ತೊಗಲು ಚೀಲವೆನ್ನುತ್ತಾನೆ.

ಹೊಗೆಯ ತಿಂಬುವದೊಂದು । ಸುಗುಣವೆಂದೆನಬೇಡ ।
ಹೊಗೆಯ ಕುಡಿದೆಲೆಯ ನಗಿವ ಬಾಯ್ಸಿಂದಿಯ ।
ಲಗಳೆಯಂತಿಹುದು ಸರ್ವಜ್ಞ।

**ನೆತ್ತ:** ಇದೊಂದು ಜೂಜಾಟ ಮಹಾಭಾರತದ ವನವಾಸ ಅಜ್ಞಾತವಾಸಕ್ಕೆ ಮುನ್ನುಡಿ ಬರದದ್ದೆ ಈ ನೆತ್ತವೆಂಬುದನ್ನು ಯಾರು ಮರೆಯಲಾಗದು. ಪಗಡೆಯಾಟವನ್ನು ಭಾರತದ ಪ್ರತೀಕವೆಂದು ಕರೆದದ್ದುಂಟು. ದೇವಾನುದೇವತೆಗಳು ಮನೋರಂಜನೆಗಾಗಿ ಸ್ಪರ್ಧಾ ಮನೋಭಾವನೆಯನ್ನು ಪ್ರದರ್ಶಿಸಲು ಪಗಡೆ ಆಡುತ್ತಿದ್ದರೆಂಬ ಸಂಗತಿಯನ್ನು ನಮ್ಮ ಪುರಾಣಗಳು ಸಾರುತ್ತವೆ.

ನೆತ್ತವೂ ಕುತ್ತವೂ । ಹತ್ತಿದೊಡೆ ಅಳವಲ್ಲ ।
ಕುತ್ತದಿಂ ದೇಹ ಬಡವಕ್ಕು, ನೆತ್ತದಿಂ ।
ಬತ್ತಲೆಯಕ್ಕು ಸರ್ವಜ್ಞ ।

ಆಡಿ ನಳ ಕೆಟ್ಟ, । ಮತ್ತಾಡಿ ಧರ್ಮಜ ಕೆಟ್ಟ ।
ನೋಡಿದ ನಾಲ್ವರು ತಿರಿದುಣಲು ನೆತ್ತವನು ।
ಆಡಬೇಡೆಂದ ಸರ್ವಜ್ಞ ।

ಆಡಿದವರಿದ್ದಂತೆ । ನೋಡಿದವ ತಾ ಕೆಟ್ಟ ।
ಬೇಡುವವ ಕೆಟ್ಟ, ನೆತ್ತವನು ಆಡುವರ ।

ಕೂಡಿದವ ಕೆಟ್ಟ ಸರ್ವಜ್ಞ ।

ನೆತ್ತವದು ಒಳಿತೆಂದು । ನಿತ್ಯವಾಡಲು ಬೇಡ ।
ನೆತ್ತದಿಂ ಕುತ್ತ ಮುತ್ತಿ ಬರೆ ಸುತ್ತರಿದು ।
ಕತ್ತಲಾಗಿಹುದು ಸರ್ವಜ್ಞ ।

ಸರ್ವಜ್ಞ ದುಶ್ಚಟಗಳ ಕುರಿತು ಹೇಳುವಲ್ಲಿ ಸಮಾಜದ ಜೀವಿಗಳ ಜೀವನದ ಆಳಕ್ಕಿಳಿದು ಯೋಚಿಸುತ್ತಾನೆ. ಈ ಮೇಲೆ ಬರುವ **'ನೆತ್ತ–ಕುತ್ತ'** ನೆತ್ತವೆಂದರೆ ಜೂಜು, ಕುತ್ತವೆಂದರೆ ರೋಗ ಇಲ್ಲಿ ಬಳಸಿದ ಪದಗಳಲ್ಲಿ ಆಂತರಿಕ ಮತ್ತು ಬಾಹ್ಯ ವ್ಯಸನಗಳಿಗೆ ಸಂಬಧಿಸಿದ್ದು. ಇವೆರಡೂ ಯೋಗ್ಯವಲ್ಲ ಕುತ್ತದಿಂದ ದಿನೇ ದಿನೇ ದೇಹ ಕೃಷವಾಗುತ್ತಾ ಹೋದರೆ, ನೆತ್ತದಿಂದ ಇದ್ದ ಎಲ್ಲ ಸಂಪತ್ತನ್ನು ಕಳೆದುಕೊಂಡು **'ಬತ್ತಲೆ'** ಯಾಗಿ ಇಲ್ಲದಂತಾಗಿ ಬಡವನಾಗುತ್ತಾನೆ. ಜೂಜು ಎಂಬ ದುಶ್ಚಟದಿಂದ ಎಲ್ಲದೂ ಸರ್ವನಾಶವಾಗಿ ಕೊನೆಗೆ ದೇಹಕ್ಕೆ ರೋಗವಂಟಿ ನಿರ್ಗತಿಕನಾಗಿ ಈ ಜಗದ ಗಾಡಾಂಧಕಾರದಲ್ಲಿ ಮುಳುಗಿ ಹೋಗುತ್ತೀಯಾ ಎಂಬ ಸೂಚನೆ ನೀಡುತ್ತಾನೆ. ದುಶ್ಚಟಗಳ ಪಾಪಪ್ರಜ್ಞೆಯಲ್ಲಿ ಮುಳುಗಿದ ಜನರ ಕೈ ಹಿಡಿದು ಮೇಲೆತ್ತುವ ಮಾನವೀಯತೆ ಸರ್ವಜ್ಞನಿಗಿದೆ. ಪಗಡೆಯನ್ನು ಆಡಿದ ನಳ, ಧರ್ಮಜ ಅಷ್ಟೇ ಅಲ್ಲದೆ ಅವನ ಸಹೋದರರಿಗೆ ವನವಾಸವೇ ಗತಿಯಾಗಿ ತಿರಿದುಣ್ಣುವಂತಹ ವಿಷಮ ಸ್ಥಿತಿ ಬಂದದ್ದು ವಿಪರ್ಯಾಸವಲ್ಲವೇ? ತಾನಲ್ಲದೆ ತನ್ನ ವಂಶವನ್ನು ವಿನಾಶದಂಚಿಗೆ ಒಯ್ಯುತ್ತದೆ. ಆದ್ದರಿಂದ ಅಂತಹ ದುಶ್ಚಟಗಳಿಂದ ದೂರವಿರವುದೆ ಒಳಿತೆನ್ನುತ್ತಾನೆ.

**ಹೇವ : 'ಹಮ್ಮಿಗೆ ಹೋಗಿ ಬ್ರಹ್ಮ ಕೆಟ್ಟ'** ಎಂಬ ಗಾದೆಯಂತೆ ಮನುಷ್ಯನಿಗೆ ಈ ಗುಣ ಒಳ್ಳೆಯ ನಡತೆಯಲ್ಲ. ಈ ಗುಣದಿಂದ ಸಾಧನೆ ಮಾಡಿದವರು ಯಾರೂ ಇಲ್ಲ. ಮನಸ್ಸಿಗೆ ವಿರೋಧವಾದ ಈ ದುರ್ನಡತೆಯಿಂದ ತಮ್ಮ ಬಲ ಪ್ರದರ್ಶನ ಮಾಡಲು ಹೋದವರು ಮಣ್ಣಾಗಿ ಹೋಗಿದ್ದನ್ನು ಸರ್ವಜ್ಞನ ಈ ಕೆಳಗಿನ ವಚನಗಳು ಹಮ್ಮು (ಹೇವ)ಮಾನವನ ಪ್ರವೃತ್ತಿಗೆ ಸನ್ನಡತೆಯಲ್ಲವೆಂದು ಉಪದೇಶಿಸುತ್ತಾನೆ

ಜಾವಕ್ಕೆ ಬದುಕುವರೆ । ಹೇವಕ್ಕೆ ಬದುಕುವದು ।
ರಾವಣನು ಸತ್ತನೆನಬೇಡ, ರಾಮಂಗೆ ।
ಹೇವ ಬಿಟ್ಟಿಹುದೆ ? ಸರ್ವಜ್ಞ।

ಬಲವಂತ ನಾನೆಂದು । ಒಲಿದು ಹೋರಲು ಬೇಡ ।
ಬಲವಂತ ವಾಲಿ ಶ್ರೀರಾಮನೊಡನಾಡಿ ।
ಛಲದಿಂದ ಕೆಟ್ಟ ಸರ್ವಜ್ಞ ।

ಅಹಂಕಾರ ಕಿಚ್ಚು ಇದ್ದಂತೆ ಅದು ಒಮ್ಮೆ ಹತ್ತಿದರೆ ಸುಡದೆ ಬಿಡದು. ಇಂತಹ ಹಮ್ಮಿಗೊಳಗಾಗಿ ದೇವಾನುದೇವತೆಗಳು ಲೋಕದ ಜನರೂ ಕಷ್ಟಕ್ಕೀಡಾದುದು ಸರ್ವವಿಧಿತ. ಆದ ಕಾರಣ ಅಹಂಕಾರದ ಕಿಚ್ಚು ನಮಗೆ ಹತ್ತಿಕೊಳ್ಳದಂತೆ ಜಾಗ್ರತೆ ವಹಿಸಬೇಕು. ಅದನ್ನು ಮೆಟ್ಟಿ ನಿಲ್ಲುವುದೆ ನಮಗೆ ಹಿತಕಾರಿ. ಅಹಂಕಾರದ ನಿರಸನ ಇಹ–ಪರಗಳೆರಡರಲ್ಲಿಯೂ ನಮಗೆ ಒಳ್ಳೆಯದನ್ನೇ ಮಾಡುತ್ತದೆ.

---

**ಆಧಾರ ಗ್ರಂಥಗಳು :**


೧. **ಸರ್ವಜ್ಞ ಒಂದು ಅಧ್ಯಯನ:** ಲೇ.ದೇಜಗೌ. ಪ್ರ.ಪ್ರಕಾಶನ ಮಂದಿರ,ನಿಯಮಿತ.ಬೆಂಗಳೂರು, ೧೯೭೪

೨. **ಸರ್ವಜ್ಞನ ಸಾಹಿತ್ಯ ಕುರಿತ ಅಧ್ಯಯನಗಳು:** ಸಂ.ಡಾ.ವೀರೇಶ.ಬಡಿಗೇರ, ಕನ್ನಡ ವಿ.ವಿ.ಹಂಪಿ–೨೦೧೪

೩. **ಸತ್ಯ ಮತ್ತು ಮೌಲ್ಯ:** ವಿ.ಸೀತಾರಾಮಯ್ಯ. ಪ್ರ.ಬೆ.ವಿ.ವಿ–೧೯೭೧.

೪. **ಒಳ್ಳೆಯರಾಗು ಕೆಟ್ಟ ಚಟವನ್ನು ಬಿಟ್ಟು ಬಿಡಿ** : ಲೇ.ಗುರೂಜಿ ಶ್ರೀ ಋಷಿ ಪ್ರಭಾಕರ್: ಪ್ರ.ಋಷಿ ಸಂಸ್ಕೃತಿ ವಿದ್ಯಾ ಕೇಂದ್ರ, ಜಯನಗರ ಬೆಂಗಳೂರ.–೨೦೧೧

೫. **ಸರ್ವಜ್ಞ:** ಕನ್ನಡ ಅಧ್ಯಯನ ಸಂಸ್ಥೆ ಮೈಸೂರು. ವಿ.ವಿ–೧೯೭೬

೬. **ಜಂಗಮ ಕವಿ ಸರ್ವಜ್ಞ:** ಡಾ.ಬಿ.ಜಿ.ಚನ್ನೇಶ ಹೊನ್ನಾಳಿ. ಸಿಂಚನ ಗ್ರಂಥಮಾಲೆ ಹಾವೇರಿ.–೨೦೦೮

೭. ಸರ್ವಜ್ಞ ಕವಿ–ಜೀವನ ಹಾಗೂ ಕಾವ್ಯ: ಸ.ಸ.ಮಾಳವಾಡ.

೮. **ಕನ್ನಡ ಸಾಹಿತ್ಯ ಚರಿತ್ರೆ:** ರಂ.ಶ್ರೀ.ಮುಗಳಿ.

೯. **ಸಂಪ್ರದಾಯ ಮತ್ತು ಹೊಸ ಮಾರ್ಗ**: ವಿ.ಸೀತಾರಾಮಯ್ಯ.

೧೦. **ಕರ್ನಾಟಕದ ಸರ್ವಜ್ಞ: ಜನತೆಯ ಕವಿ.** ಸರ್ವಜ್ಞನ ಸಾಹಿತ್ಯ ಕುರಿತ ಅಧ್ಯಯನಗಳು.ಸಂ.ವೀರೇಶ ಬಡಿಗೆರ. ಕ.ವಿ.ವಿ.ಹಂಪಿ.–೨೦೧೪

೧೧. **ಸರ್ವಜ್ಞನ ತ್ರಿಪದಿಗಳಲ್ಲಿ ತ್ರಿಕಾಲ ಪ್ರಜ್ಞೆ:** ಡಾ.ಹೆಚ್.ಜೆ.ಲಕ್ಕಪ್ಪಗೌಡ. ಸರ್ವಜ್ಞನ ಸಾಹಿತ್ಯ ಕುರಿತ ಅಧ್ಯಯನಗಳು.ಸಂ.ವೀರೇಶ ಬಡಿಗೆರ. ಕ.ವಿ.ವಿ.ಹಂಪಿ.–೨೦೧೪

೧೨. **ಸರ್ವಜ್ಞ ವಚನಗಳ ಅರ್ಥವಿಶ್ಲೇಷಣೆ:** ಡಾ.ಜೆ.ಎಂ.ನೂಲಗೇರಿ ಬಸವ ಪ್ರಕಾಶನ ಧಾರವಾಡ ೨೦೦೯

೧೩. **ಉಷಾಕಿರಣ:** ದಿನಪತ್ರಿಕೆ

೧೪. **ಕರುಣಾಳು ಬಾ ಬೆಳಕೆ:** ದಾನದ ಮಹಿಮೆ ದಿ:೦೩–೦೫–೨೦೧೩ ಗುರುರಾಜ.ಕರ್ಜಗಿ

೧೫. **ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ:** ಸಂ.ಡಾ.ಚಿ.ಸಿ.ನಿಂಗಣ್ಣ ಸಿದ್ದಲಿಂಗ.ಬಿ.ಕೋನೆಕ. ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ. ಗುಲಬರ್ಗ–೨೦೦೮

೧೬. **ಸರ್ವಜ್ಞ:** ಒಬ್ಬ ಜನಪದ ಕವಿ.ಸರ್ವಜ್ಞ ಒಂದು ಸಮೀಕ್ಷೆ: ಕಾಳೆಗೌಡ ನಾಗವಾರ.

೧೭. **ಸರ್ವಜ್ಞನ ತ್ರಿಪದಿಗಳು ಅನುಸಂದಾನದ ನೆಲೆಗಳು:** ಸಂ.ಅಮರೇಶ ನುಗಡೋಣಿ,ಪ್ರ.ಕನ್ನಡ ವಿ.ವಿ.ಹಂಪಿ–೨೦೧೩

೧೮. **ಸರ್ವಜ್ಞನ ಸಮಾಜ ದರ್ಶನ ಮತ್ತು ಸಾಹಿತ್ಯ ತತ್ವ:** ಡಾ.ಎಂ.ಅಕಬರ ಅಲಿ.ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು, ೧೯೮೩

೧೯. **ಸರ್ವಜ್ಞನ ವಚನಗಳು:** ವಿಶೇಷಾವೃತ್ತಿ. ಉತ್ತಂಗಿ ಚನ್ನಪ್ಪ ಪ್ರಸ್ತಾವನೆ–೧೯೨೪

೨೦. Encyclopaedia Britannica, Vol.20,

೨೧. **ಕನ್ನಡ ವಿಶ್ವಕೋಶ:** ಸಂಪುಟ–೪, ೧೯೭೨

೨೨. **ವಿಜಯ ಕರ್ನಾಟಕ: ದಿನಪತ್ರಿಕೆಯ ಜ್ಞಾನ ದಿವಿಗೆ ಸಜ್ಜನರ ಸಂಗ.** ದಿ: ಅಗಸ್ಟ.೧೯.೨೦೧೨

೨೩. ಬಾಬಾ ಬುಡನ್ ಗಿರಿ ಮತ್ತು ಸಿದ್ದರ ಬೆಟ್ಟದ ಅಪೂರ್ವ ಗಿಡಮೂಲಿಕೆಗಳು ಹಾಗೂ ಸರಳ ಚಿಕಿತ್ಸೆಗಳು, ಸಂ.ವೈದ್ಯ ಎ.ಆರ್.ಎಂ.ಸಾಹೇಬ್, ಪ್ರ–ಮಠಾಧೀಶರು ಸದುರು ದಾದಾ ಹಯಾತ್ ನೀರಕಲಂದರ್ ಪೀಠ ಬಾಬಾ ಬುಡನ್ ಗಿರಿ, ಚಿಕ್ಕಮಂಗಳೂರು

೨೪. **ದಿಗಂತದಾಚೆ;** ದಿ:೦೨–೧೨–೨೦೧೫

೨೫. **ವೈದಿಕ ಹಾಗು ಸಾಹಿತ್ಯಿಕ ಬರಹಗಳು:** ಲೇ: ಡಾ.ಮಹಾದೇವ ಜೋಶಿ. ರೂಪಾ ಪ್ರಕಾಶನ ಧಾರವಾಡ–೨೦೧೪